**ದಿನಾಂಕಃ 12.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಟಿ ಎಮ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ತಿಳಿದು ಸಹಿ ಮಾಡಿರುತ್ತೇನೆ.

ಎಸ್ ಪಿ ಎ ರ ಮೂಲ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-1 ಎಂದು, ಅಸಲು ದಾವಾ ಸಂಖ್ಯೆ 239/2010 ರ ಆದೇಶ ಪ್ರತಿಗಳ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-2 ಎಂದು, ಅಸಲು ದಾವಾ ಸಂಖ್ಯೆ 239/2010 ರ ವಾದ ಪತ್ರದ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-3 ಎಂದು, ಅಸಲು ದಾವಾ ಸಂಖ್ಯೆ 239/2010 ರ ಪ್ರತಿವಾದ ಪತ್ರದ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-4 ಎಂದು, ಆರ್ ಎ ಸಂಖ್ಯೆ 8/2016 ರ ಆದೇಶ ಪ್ರತಿಗಳ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-5 ಎಂದು, ಆರ್ ಎ ಸಂಖ್ಯೆ 8/2016 ರ ಮೇಲ್ಮನವಿ ಅರ್ಜಿಯ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-6 ಎಂದು, ಆರ್ ಎ ಸಂಖ್ಯೆ 8/2016 ರಲ್ಲಿನ ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ಆದೇಶದ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-7 ಎಂದು, ಆರ್ ಎ ಸಂಖ್ಯೆ 8/2016 ರಲ್ಲಿನ ಮಧ್ಯಂತರ ಅರ್ಜಿ ಸಂಖ್ಯೆ 1 ರ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-8 ಎಂದು, ಆರ್ ಎ ಸಂಖ್ಯೆ 8/2016 ರಲ್ಲಿನ ಮಧ್ಯಂತರ ಅರ್ಜಿ ಸಂಖ್ಯೆ 2 ರ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-9 ಎಂದು, ಆರ್ ಎ ಸಂಖ್ಯೆ 8/2016 ರಲ್ಲಿನ ಮಧ್ಯಂತರ ಅರ್ಜಿ ಸಂಖ್ಯೆ 1 ಕ್ಕೆ ಸಲ್ಲಿಸಿದ್ದ ತಕರಾರಿನ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-10 ಎಂದು, ಭೂ ಮಾಪಕರು ನೀಡಿದ ತಿಳುವಳಿಕೆ ಪತ್ರವನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-11 ಎಂದು, ಯಾಚನಹಳ್ಳಿ ಗ್ರಾಮದ ಸರ್ವೆ ನಂಬರ್ 65 ರ ಫಸಲು ಪಹಣಿಯ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-12 ಎಂದು, ದಿನಾಂಕ 06.09.1988 ರ ನೋಟೀಸ್ ನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-13 ಎಂದು, ಯಾಚನಹಳ್ಳಿ ಗ್ರಾಮದ ಸರ್ವೆ ನಂಬರ್ 65 ರ ನಕ್ಷೆಯ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-14 ಎಂದು, ಅಸಲು ದಾವಾ ಸಂಖ್ಯೆ 193/1992 ರ ಮಧ್ಯಂತರ ಅರ್ಜಿ

ಸಂಖ್ಯೆ 1ರ ಮೇಲಿನ ಆದೇಶದ ದೃಢೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ